# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com Private Circulation only

ಸಂಪುಟ : VI ಸಂಚಿಕೆ : 1 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಏಪ್ರಿಲ್-ಜೂನ್ 2020


## ಅಧ್ಯಕ್ಷರ ಮಾತು



**ಶ್ರೀ ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

ಸಂಘವು ಮೇ 7, 2020 ರಂದು 26ನೇ ವರ್ಷಕ್ಕೆ ಕಾಲಿಟ್ಟಿದೆ. ತಮಗೆಲ್ಲರಿಗೂ ಸಂಘದ 26ನೇ ವರ್ಷದ ಸಂಸ್ಥಾಪನಾ ದಿನದ ಶುಭಾಶಯಗಳು.

ಸಂಘವು 2019-20ನೇ ಸಾಲಿನಲ್ಲಿ ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳವನ್ನು ದಾಖಲಿಸಿಕೊಂಡು ನಿಗದಿತ ಗುರಿಗಳನ್ನು ಮೀರಿ ಅಮೂಲಾಗ್ರ ಪ್ರಗತಿಯನ್ನು ಸಾಧಿಸಿತ್ತು. ವರ್ಷಾಂತ್ಯದ ಸಮಯದಲ್ಲಿ ಕೋವಿಡ್ ಪಿಡುಗಿನ ಕಾರಣದ ಲಾಕ್‌ಡೌನ್ ಜ್ಯಾರಿಯಲ್ಲಿದ್ದರೂ ವರ್ಷಾಂತ್ಯಕ್ಕೆ ಸಾಧಿಸಿರುವ ಸಂಘದ ಪ್ರಗತಿಯು ನಿಜಕ್ಕೂ ಪ್ರಶಂಸನೀಯವಾಗಿತ್ತು.

2020-21ನೇ ಸಾಲಿನ ಮೊದಲನೆ ತ್ರೈಮಾಸಿಕ ಅವಧಿಯನ್ನು ನಾವು ಕೊರೋನಾ ಪಿಡುಗಿನ ಸಂಕಷ್ಟಗಳೊಂದಿಗೆ ಪೂರೈಸಿದ್ದೇವೆ. ಈ ದೊಡ್ಡ ಪಿಡುಗಿನ ನಡುವೆಯೂ, ಸಂಘವು ಈ ತ್ರೈಮಾಸಿಕ ಅವಧಿಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ.

**ಸಂಘವು ದಿನಾಂಕ 30.06.2020ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.06.2019ಕ್ಕೆ ಹೋಲಿಸಿಕೊಂಡು ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.**

**ಜೂನ್ 2019ಕ್ಕೆ ಹೋಲಿಸಿದಲ್ಲಿ ಜೂನ್ 2020ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ** (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯ ವಿಭಾಗ | ಜೂನ್ 2019ಕ್ಕೆ ಇದ್ದಂತೆ | ಜೂನ್ 2020ಕ್ಕೆ ಇದ್ದಂತೆ | ಹೆಚ್ಚಳ (₹) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹201.04 Cr. | ₹247.47 Cr. | ₹46.43 ಕೋಟಿ | 23% |
| 2 | ಸಾಲ ಮತ್ತು ಮುಂಗಡ | ₹169.64 Cr. | ₹197.07 Cr. | ₹27.43 ಕೋಟಿ | 16% |
| 3 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | | |
| 4 | ನಿವ್ವಳ ಲಾಭ | ₹1.02 Cr. | ₹1.11 Cr. | ₹9 ಲಕ್ಷ | 9% |
| **5** | **ಒಟ್ಟು ವ್ಯವಹಾರ** | **₹370.68 Cr.** | **₹445.18 Cr.** | **₹74.50 ಕೋಟಿ** | **20%** |

1. ಸಂಘದ ಒಟ್ಟು ಠೇವಣಾತಿಯು ₹247 ಕೋಟಿಯಷ್ಟಿದ್ದು, 2019ರ ಜೂನ್‌ಗಿಂತ ₹46 ಕೋಟಿ ಹೆಚ್ಚಳಗೊಂಡು, ಶೇ.23 ರಷ್ಟು ವೃದ್ಧಿಗೊಂಡಿರುವುದು,
2. ಹೊರಬಾಕಿ ಸಾಲವು ₹197 ಕೋಟಿಯಷ್ಟಿದ್ದು 2019ರ ಜೂನ್‌ಗಿಂತ ₹27 ಕೋಟಿ ಹೆಚ್ಚಳಗೊಂಡು ಶೇ.16ರಷ್ಟು ವೃದ್ಧಿಗೊಂಡಿರುವುದು,
3. ಒಟ್ಟು ವ್ಯವಹಾರವು ₹445 ಕೋಟಿಯಷ್ಟಿದ್ದು, 2019ರ ಜೂನ್‌ಗಿಂತ ₹74 ಕೋಟಿ ಹೆಚ್ಚಳಗೊಂಡು ಶೇ.20ರಷ್ಟು ವೃದ್ಧಿಯಾಗಿರುವುದು,
4. ಸಂಘದ ಈ ಮೇಲಿನ ಪ್ರಗತಿಯನ್ನು ಗಮನಿಸಿದಾಗ, ನಾವು ಮುಖ್ಯವಾಗಿ ಕಂಡುಕೊಳ್ಳುವುದೇನೆಂದರೆ, ಸರ್ಕಾರವು ಲಾಕ್‌ಡೌನ್ ಅವಧಿಯ ನಿಮಿತ್ತ, ಸಾಲ ಮರುಪಾವತಿಗೆ ಘೋಷಿಸಿರುವ Moratorium ಅವಧಿಯು ಜ್ಯಾರಿಯಲ್ಲಿದ್ದರೂ ಸಾಲಗಾರರು, ಮುಖ್ಯವಾಗಿ ಬಡ್ಡಿ ಮರುಪಾವತಿಯನ್ನು ಮಾಡುತ್ತಿದ್ದು, ಸಂಘದ 30.06.2020ರ ನಿವ್ವಳ ಲಾಭವನ್ನು ಹಿಂದಿನ ವರ್ಷ 30.06.2019ರ ತ್ರೈಮಾಸಿಕ ಅವಧಿಗೆ ಹೋಲಿಸಿದಾಗ ₹10 ಲಕ್ಷ ಹೆಚ್ಚಾಗಿರುತ್ತದೆ.

ಸಾಲಗಳ ಮೇಲಿನ ಬಡ್ಡಿ ಹಿಂದಿನ ಸಾಲು 30.06.2019ನೇ ತ್ರೈಮಾಸಿಕಕ್ಕೆ, ₹4.08 ಕೋಟಿ ಸಂಗ್ರಹಿಸಲಾಗಿದ್ದು, ಈ ತ್ರೈಮಾಸಿಕ ಅವಧಿ 30.06.2020ಕ್ಕೆ ₹ 5.30 ಕೋಟಿಯಷ್ಟು ಸಂಗ್ರಹಿಸಲಾಗಿರುತ್ತದೆ.

ಸಂಘದಲ್ಲಿ ಮಾರ್ಚ್ 2020ಕ್ಕೆ ₹235 ಕೋಟಿ ಠೇವಣಾತಿ ಇದ್ದು, ಇದು ₹12 ಕೋಟಿ ಹೆಚ್ಚಳವಾಗಿ ದಿನಾಂಕ 30.06.2020ಕ್ಕೆ ₹247 ಕೋಟಿ ಆಗಿರುತ್ತದೆ. ಮಾರ್ಚ್ 2020ರಲ್ಲಿ ಹೊರಬಾಕಿ ಸಾಲವು ₹195 ಕೋಟಿ ಇದ್ದು ಇದು ₹197 ಕೋಟಿಯಾಗಿದೆ. ಒಟ್ಟು ವ್ಯವಹಾರವು ₹14 ಕೋಟಿಯಷ್ಟು ವೃದ್ಧಿಗೊಂಡು, 30.06.2020ಕ್ಕೆ ಒಟ್ಟು ವ್ಯವಹಾರ (ಠೇವಣಾತಿ + ಹೊರಬಾಕಿ ಸಾಲ) ₹445 ಕೋಟಿ ಮೀರಿರುತ್ತದೆ.

ಸಂಘದ ಸದಸ್ಯ ಠೇವಣಿದಾರರು ತೋರಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಈ ಕ್ಲಿಷ್ಟಕರ ಸಂದರ್ಭದಲ್ಲೂ, ಉತ್ತಮ ರೀತಿಯಲ್ಲಿ ಸಂಘದ ವ್ಯವಹಾರಾಭಿವೃದ್ಧಿಯಾಗಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಸದ್ಯಕ್ಕೆ ಕೊರೋನಾ ಪಿಡುಗಿನೊಂದಿಗೆ, ನಾವು ಮುಂದಿನ ಹೆಜ್ಜೆ ಹಾಕಬೇಕಾದ ಅನಿವಾರ್ಯತೆ ಇದೆ. ಈ ಪಿಡುಗಿನಿಂದ ನಾವು ಆದಷ್ಟು ಬೇಗ ಹೊರಬಂದು ಶೀಘ್ರದಲ್ಲೇ ಜನಜೀವನ ಮತ್ತು ವ್ಯವಹಾರಗಳು ಸಹಜತೆಗೆ ಮರಳಲಿ ಎಂದು ಆಶಿಸುತ್ತೇನೆ. ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

**ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು

## ಕೋವಿಡ್–19 ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯಿಂದ ನೆರವು

I) **ದಿನಾಂಕ 02.04.2020ರಂದು ಸಹಕಾರಿ ಇಲಾಖೆಯ ಮೂಲಕ ಸಂಘದ ವತಿಯಿಂದ ₹2 ಲಕ್ಷವನ್ನು ಮುಖ್ಯಮಂತ್ರಿ ಪರಿಹಾರ ನಿಧಿ ಕೋವಿಡ್–19ಗೆ ದೇಣಿಗೆಯನ್ನು ನೀಡಲಾಗಿದೆ.**

II) **ದಿನಾಂಕ 30.04.2020ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಮುಖ್ಯಮಂತ್ರಿ ಪರಿಹಾರ ನಿಧಿ ಕೋವಿಡ್–19ಗೆ ಸಂಘದ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವತಿಯಿಂದ ದೇಣಿಗೆಯನ್ನು ದ.ಕ. ಜಿಲ್ಲಾಧಿಕಾರಿ ಯವರಾದ ಶ್ರೀಮತಿ ಸಿಂಧೂ ಬಿ. ರೂಪೇಶ್ ರವರಿಗೆ ಹಸ್ತಾಂತರಿಸಿದರು.**



III) **<u>ಸಂಘದ ವತಿಯಿಂದ ಆಯ್ದ ಫಲಾನುಭವಿಗಳಿಗೆ ಆಹಾರ ಸಾಮಾಗ್ರಿಗಳ ಕಿಟ್ ವಿತರಣೆ.</u>**

ಸಂಘದ ವತಿಯಿಂದ ಮಂಗಳೂರು ಮಹಾನಗರದ ವ್ಯಾಪ್ತಿಯಲ್ಲಿರುವ, ಮಂಗಳೂರು, ಸುರತ್ಕಲ್, ತೊಕ್ಕೊಟ್ಟು, ವೆಲೆನ್ಸಿಯಾ, ಚಿಲಿಂಬಿ, ಹಂಪನಕಟ್ಟೆ ಶಾಖೆಗಳ ಮತ್ತು ಕೇಂದ್ರ ಕಛೇರಿಯ ವತಿಯಿಂದ ಫಲಾನುಭವಿಗಳಿಗೆ ಆಹಾರ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮವನ್ನು ದಿನಾಂಕ 09.05.2020ರಂದು ಸಂಘದ ಕೇಂದ್ರ ಕಛೇರಿಯ ವಠಾರದಲ್ಲಿ ನಡೆಸಲಾಯಿತು.




ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಮಾತನಾಡಿ, ಸಂಘವು ಈ ಹಿಂದೆಯೂ ಪ್ರಾಕೃತಿಕ ವಿಕೋಪಗಳಿಂದ ಜನರು ಸಂಕಷ್ಟವನ್ನು ಎದುರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ತನ್ನ ದೇಣಿಗೆಯನ್ನು ನೀಡುತ್ತಾ ಬಂದಿದೆ ಹಾಗೂ ಇದೀಗ ಕೋವಿಡ್–19ನ ಸಂಕಷ್ಟದ ಸಮಯದಲ್ಲೂ ಸಂಘದ ವತಿಯಿಂದ ₹2 ಲಕ್ಷ ಹಾಗೂ ಸಂಘದ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳ ವೈಯಕ್ತಿಕ ನೆಲೆಯಲ್ಲಿ ₹1.5 ಲಕ್ಷ ಹೀಗೆ ಒಟ್ಟು ₹3.5 ಲಕ್ಷ ಮೊಬಲಗನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆಯಾಗಿ ನೀಡಿ ಸ್ಪಂದಿಸಿದೆ. ಇಂದು ಸಂಘದ ಎಲ್ಲಾ 20 ಶಾಖೆಗಳು ಮತ್ತು ಕೇಂದ್ರ ಕಛೇರಿಯ ಮೂಲಕ ಫಲಾನುಭವಿಗಳಿಗೆ 210 ಆಹಾರ ಸಾಮಾಗ್ರಿಗಳ ಕಿಟ್ ವಿತರಣೆಯ ಕಾರ್ಯಕ್ರಮಗಳನ್ನು ಆಯಾಯ ಶಾಖೆಗಳಲ್ಲಿ ನಡೆಸಿದ್ದೇವೆ. ಇಂತಹ ಸಾಮಾಜಿಕ ಕಳಕಳಿಯ ಸೇವೆಯನ್ನು ನೀಡುತ್ತಾ ನಾವು ಜನರ ಕಷ್ಟಕ್ಕೆ ಸದಾ ನೆರವಿನ ಹಸ್ತವನ್ನು ಚಾಚಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಶ್ರೀ ಪ್ರವೀಣ್ ಬಿ. ನಾಯಕ್, ಸಹಕಾರ ಸಂಘಗಳ ಉಪನಿಬಂಧಕರು ದ.ಕ. ಜಿಲ್ಲೆ, ಮಂಗಳೂರು ಇವರು ಮಾತನಾಡಿ, ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ ಸಮಾಜಿಕ ಕಳಕಳಿಯ ಸೇವೆಗಳನ್ನು ಶ್ಲಾಘಿಸಿ, ನಾವೆಲ್ಲರೂ ಶುಚಿತ್ವ, ಸಾಮಾಜಿಕ ಅಂತರವನ್ನು ಪಾಲಿಸಿ ಆರೋಗ್ಯವನ್ನು ಕಾಪಾಡಿಕೊಂಡು ಈ ಕೊರೋನಾ ಸಂಕಷ್ಟದಿಂದ ಆದಷ್ಟು ಶೀಘ್ರ ಪಾರಾಗುವಂತಾಗಲಿ ಎಂದು ಹಾರೈಸಿ ಕಿಟ್‌ಗಳನ್ನು ಫಲಾನುಭವಿಗಳಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರಾದ ಶ್ರೀ ಪಿ.ಎಸ್. ಅಡ್ಯಂತಾಯ, ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ, ಮುಖ್ಯ ವ್ಯವಸ್ಥಾಪಕರಾದ ಶ್ರೀ ಮೋಹನ್‌ದಾಸ್ ಶೆಟ್ಟಿ, ಶಾಖಾಧಿಕಾರಿಗಳಾದ ಶ್ರೀ ಮೋಹನ್‌ದಾಸ್ ಶೆಟ್ಟಿ, ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ಚಂದ್ರಹಾಸ್ ಶೆಟ್ಟಿ, ಶ್ರೀಮತಿ ರೇಖಾ ಎನ್ ಶೆಟ್ಟಿ, ಶ್ರೀ ಗೋಪಾಲಕೃಷ್ಣ ಪಿ, ಶ್ರೀಮತಿ ಸವಿತಾ ಎಂ ಪೂಂಜ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

IV) **<u>ಸಂಘದ ಶ್ರೀ ರಾಮಕೃಷ್ಣ ನಿತ್ಯ ನಿಧಿ ಸಂಗ್ರಾಹಕರು ಮತ್ತು ಚಿನ್ನಾಭರಣ ಸರಾಫರರು ಇವರಿಗೆ ಆರ್ಥಿಕ ನೆರವು</u>**

ಕೋವಿಡ್–19ರ ಲಾಕ್‌ಡೌನ್ ಅವಧಿಯಲ್ಲಿ ವ್ಯವಹಾರ ನಿಯಂತ್ರಣಗಳಿಂದಾಗಿ ಆದಾಯ ಕೊರತೆಯನ್ನು ಅನುಭವಿಸುತ್ತಿದ್ದ ಸಂಘದಲ್ಲಿರುವ 24 ಮಂದಿ ಶ್ರೀ ರಾಮಕೃಷ್ಣ ನಿತ್ಯನಿಧಿ ಸಂಗ್ರಾಹಕರು (ಪಿಗ್ಮಿ ಏಜೆಂಟ್‌ಗಳು) ಹಾಗೂ 22 ಮಂದಿ ಚಿನ್ನಾಭರಣದ ಸರಾಫರರುಗಳಿಗೆ ಸಂಘದ ವತಿಯಿಂದ ತಲಾ ₹2,500/– ರಂತೆ ಒಟ್ಟು ₹1,15,000/–(ರೂಪಾಯಿ ಒಂದು ಲಕ್ಷ ಹದಿನೈದು ಸಾವಿರ ಮಾತ್ರ) ಧನ ಸಹಾಯ ಮಾಡಲಾಗಿದೆ.

# ಹುಟ್ಟು ಹಬ್ಬದ ಶುಭಾಶಯಗಳು

ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ – ನಿರ್ದೇಶಕರು
ಸವಣೂರು ಶ್ರೀ ಕೆ. ಸೀತಾರಾಮ ರೈ – ನಿರ್ದೇಶಕರು

## ಸಿಬ್ಬಂದಿಗಳ ಹೆಸರು ಮತ್ತು ಶಾಖೆ

| | | | |
|---|---|---|---|
| ಶ್ರೀ ತಿಮ್ಮಯ್ಯ ಶೆಟ್ಟಿ | ಹಂಪನಕಟ್ಟೆ | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಶ್ರೀ ಚಂದ್ರಹಾಸ್ ಶೆಟ್ಟಿ | ವೆಲೆನ್ಸಿಯಾ | ಶ್ರೀಮತಿ ರೇಖಾ ಎನ್. ಶೆಟ್ಟಿ | ಸುರತ್ಕಲ್ |
| ಶ್ರೀ ದಿನೇಶ್ ಶೆಟ್ಟಿ | ಕಡಬ | ಶ್ರೀಮತಿ ಮಮತಾ ಎಂ. | ಮಂಗಳೂರು |
| ಶ್ರೀಮತಿ ವೈಶಾಲಿ | ಬಿ.ಸಿ.ರೋಡ್ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀ ದಿನೇಶ್ ರೈ | ಸುಳ್ಯ | ಶ್ರೀ ಮೋಹನ್ ಶೆಟ್ಟಿ | ಉಡುಪಿ |
| ಶ್ರೀ ಸುಧೀರ್ ಕುಮಾರ್ ಡಿ. | ಚಿಲಿಂಬಿ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ದಿತೇಶ್ | ಮುಲ್ಕಿ | ಶ್ರೀ ಅಮಿತ್‌ಕುಮಾರ್ | ವೆಲೆನ್ಸಿಯಾ |
| ಶ್ರೀ ಸುಭ್ರತ್ | ಹೆಬ್ರಿ | ಶ್ರೀಮತಿ ಅರುಣ ರೈ | ಚಿಲಿಂಬಿ |
| ಶ್ರೀ ಜಯರಾಮ್ | ಬೈಂದೂರು | ಶ್ರೀ ಸುಜಿತ್ | ಚಿಲಿಂಬಿ |
| ಶ್ರೀ ಪ್ರವೀಣ್ ರೈ | ಕಡಬ | ಶ್ರೀಮತಿ ಶ್ರೀಲಕ್ಷ್ಮಿ | ಸುರತ್ಕಲ್ |
| ಶ್ರೀ ವಿರಾಜ್ ಜೆ. ಶೆಟ್ಟಿ | ಕಾರ್ಕಳ | ಶ್ರೀಮತಿ ಫ್ಲಾವಿಯಾ ಜೇನ್ ಪಿಂಟೋ | ವಿಟ್ಲ |
| ಶ್ರೀಮತಿ ಮಮತಾ ಎಚ್. | ಪುತ್ತೂರು | ಕು. ಸುಶ್ಮಿತಾ | ಉಡುಪಿ |
| ಶ್ರೀ ಅಶೋಕ್ ಎಂ. | ಮೂಡಬಿದ್ರಿ | ಕು. ಸುಮತಿ | ಬಿ.ಸಿ.ರೋಡ್ |

ಈ ತ್ರೈಮಾಸಿಕ ಅವಧಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭವನ್ನು ಕೋರುತ್ತೇವೆ.

## ಶ್ರದ್ಧಾಂಜಲಿ

ಈ ಅವಧಿಯಲ್ಲಿ ದೈವಾಧೀನರಾದ,

- ಶ್ರೀಮತಿ ವಿಜಯ ಎಸ್. ಶೆಟ್ಟಿ (ಸಂಘದ ನಿರ್ದೇಶಕರಾದ ಡಾ| ಸುಧಾಕರ ಎಂ. ಶೆಟ್ಟಿಯವರ ಧರ್ಮಪತ್ನಿ)
- ಶ್ರೀಮತಿ ಅಕ್ಕಮ್ಮ ಜೆ. ಶೆಟ್ಟಿ (ಬೈಂದೂರು ಶಾಖೆಯ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ಬಿ.ಜಗನ್ನಾಥ ಶೆಟ್ಟಿಯವರ ಧರ್ಮಪತ್ನಿ)ರವರ

ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು. ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಶಾಖೆಗಳಲ್ಲಿ ಗ್ರಾಹಕ ಸಂಪರ್ಕ ಸಭೆ

ಗ್ರಾಹಕರೊಂದಿಗೆ ಉತ್ತಮ ಸೌಹಾರ್ದತೆ, ಸಂವಹನೆಯ ವೃದ್ಧಿ, ವಿಚಾರ ವಿನಿಮಯಕ್ಕೆ ಸಹಕಾರಿಯಾಗುವಂತೆ, ಶಾಖೆಗಳ ಸ್ಥಾಪನಾ ದಿನದಂಗವಾಗಿ, 2019–20ನೇ ಸಾಲಿನಲ್ಲಿ ಕಳೆದ ತ್ರೈಮಾಸಿಕ ಅವಧಿಗಳಲ್ಲಿ ಸಂಘದ ಸುರತ್ಕಲ್, ಹಂಪನಕಟ್ಟೆ, ಮೂಡಬಿದ್ರಿ, ಉಪ್ಪಿನಂಗಡಿ, ಬಿ.ಸಿ.ರೋಡ್, ಸುಳ್ಯ, ಪುತ್ತೂರು, ಮುಲ್ಕಿ, ಕಾರ್ಕಳ, ಹೆಬ್ರಿ ಮತ್ತು ಚಿಲಿಂಬಿ ಶಾಖೆಗಳಲ್ಲಿ ಗ್ರಾಹಕ ಸಂಪರ್ಕ ಸಭೆಗಳು ಜರಗಿಸಲಾಗಿದೆ.

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.